ಅಧ್ಯಕ್ಷರು : ರಾಜಣ್ಣನವರೇ ಕೆಲವು ಸಲ ಇವೆಲ್ಲಾ ಆಗುತ್ತವೆ. ನಾವು ಅಂದು ಕೊಂಡಂಥ ವಿಷಯ ಬಿಟ್ಟು ಬೇರೆ ವಿಚಾರ ಪ್ರಸ್ತಾಪ ಮಾಡುತ್ತಾರೆ, ಸಮಯ ಆ ಕಡೆ ಹೋಗುತ್ತಾ ಇದೆಲ್ಲ ಆಗುತ್ತದೆ. ಮತ್ತೆ ಸಚೇತಕರು ನಮಗೆ ಒಂದು ಪಟ್ಟಿಯನ್ನು ಕಳುಹಿಸುತ್ತಾರೆ. ಕೆಲವು ಸಲ ನಾವ ಪಟ್ಟಿಯನ್ನು ಕೂಡ ಕಟ್ ಮಾಡುತ್ತಾ ಹೋಗುತ್ತೇವೆ. ಟೈಮ್ ಕೂಡ ಕಟ್ ಮಾಡುತ್ತೇವೆ. ನೀವ ಮಾತನಾಡಿದ ಒಟ್ಟು ಅರ್ಥ ಏನಿದೆ ಎಂದರೆ ಎಲ್ಲರಿಗೂ ಅವಕಾಶ ಸಿಗಬೇಕು ಎನ್ನುವುದು. ಇವೊತ್ತ ಕಡೇ ದಿವಸ ಅದಕಾರಣ ಇದುವರೆಗೆ ಆದದ್ದನ್ನು ದಯಮಾಡಿ ಬೇಸರ ಮಾಡಿಕೊಳ್ಳದೆ ಸಹಕರಿಸಿ ಮುಂದೆ ಬಡ್ಜೆಟ್ ಅಧಿವೇಶನ ಬರುತ್ತದೆ. ಆಗ ಸಮಯ ಕೊಡುತ್ತೇನೆ. ಮುಂದೆ ಬಡ್ಜೆಟ್ ಮೇ ಜನರಲ್ ಡಿಸ್ಕಶನ್ ಪ್ರಾರಂಭ ಮಾಡಿದಾಗ, ಡಿಮ್ಯಾಂಡ್ಸ್‌ಗಳ ಮೇಲೆ ಡಿಸ್ಕಶನ್ ಪ್ರಾರಂಭ ಮಾಡಿದಾಗ ಖಂಡಿತ ನೀವು ಹೇಳಿದ ಸಲಹೆಯನ್ನು ನಾನು ಪಾಲನೆ ಮಾಡುತ್ತೇನೆ. Today is the last day Hon'ble Members want to speak certain small matters. I will give them 2 minutes each. I request their co-operation.

(ಆ) ಸಣಬು, ಸಣದ ಕೊಪ್ಪಲು ಹಾಗೂ ತಿರ್ಮಲಾಪುರ ಗ್ರಾಮದಲ್ಲಿ 250 ಎಕರೆ ಮುಳುಗಡೆಯಾಗಿರುವ ಬಗ್ಗೆ

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ಎರಡು ವಿಷಯ ಇದೆ. ಒಂದೊಂದು ನಿಮಿಷದಲ್ಲಿ ಪ್ರಸ್ತಾಪ ಮಾಡುತ್ತೇನೆ. ಸಣಬಾ, ಸಣದಕೊಪ್ಪಲು ತಿರ್ಮಲಾಪುರದಲ್ಲಿ 250 ಎಕರೆ ಮುಳುಗಡೆಯಾಗಿದೆ. ಸುಮಾರು 1993-94, 1994-95, 1995-96ನೇ ಸಾಲಿನಲ್ಲಿ 250 ಏಕರೆ ಅವರಿಗೆ ಕಾಂಪೆನ್‌ಸೇಶನ್ ಕೊಟ್ಟಿಲ್ಲ. ಅವರು ಹೇಮಾವತಿ ಕಚೇರಿಗೆ ಮುತ್ತಿಗೆ ಹಾಕಿ ಹಣಕ್ಕಾಗಿ ಒತ್ತಾಯ ಮಾಡಿದ್ದಾರೆ. ನಾಲ್ಕು ವರ್ಷಗಳಿಂದ ಮುಳುಗಡೆಯಾಗಿದ್ದು, ರೈತರು ನಷ್ಟವನ್ನು ಅನುಭವಿಸು ತ್ತಿದ್ದಾರೆ ಹಾಗೂ ಅವರಿಗೆ ಬಹಳ ಅನಾನುಕೂಲವಾಗಿದೆ. ರೆವೆನ್ಯೂ ಇಲಾಖೆಯವರು ಹಾಗೂ ನೀರಾವರಿ ಇಲಾಖೆಯವರು ಸರಿಯಾಗಿ ಕೆಲಸ ಮಾಡಿಲ್ಲ. ಆದಕಾರಣ ಅದರ ಬಗ್ಗೆ ಸರ್ಕಾರ ತ್ವರಿತವಾಗಿ ಕಾರ್ಯಕ್ರಮವನ್ನು ರೂಪಿಸಿ ರೈತರಿಗೆ ಹಣ ಕೊಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

(ಆ) ಶಿಂಷಾ ನದಿ ದಡದಲ್ಲಿ 15 ಎಕರೆ ಮರಳು ಇರುವ ಕುರಿತು

ಇನ್ನು ಎರಡನೇಯದಾಗಿ ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರಿಗೆ ಸಂಬಂಧಪಟ್ಟಂತೆ ಶಿಂಷಾ ನದಿ ದಡದಲ್ಲಿ ಸುಮಾರು 15 ಎಕರೆ ಮರಳು ಇದೆ. ಅಲ್ಲಿ ಇಡೀ ಗ್ರಾಮದವರು ಒಂದು ಸಮಿತಿಯನ್ನು ಮಾಡುವುದರ ಮೂಲಕ, ಆ ಮರಳನ್ನು ಆ ಗ್ರಾಮದಲ್ಲಿ ಇರತಕ್ಕಂಥ ಶಾಲೆ, ದೇವಸ್ಥಾನಗಳು, ರಸ್ತೆಗಳಿಗೆ ಉಪಯೋಗಿಸಿಕೊಂಡು ಒಂದು ಗ್ರಾಮ ಸ್ವರಾಜ್ಯ ಸಮಿತಿ ಮಾಡುವುದರ ಮೂಲಕ ಅದರ ಉಪಯೋಗ ಪಡೆದುಕೊಂಡು ಅದರಿಂದ ಬಂದಂಥ ಆದಾಯವನ್ನು ಇಡೀ ಗ್ರಾಮದ ಅಭಿವೃದ್ಧಿಗೋಸ್ಕರ ಉಪಯೋಗಿಸತಕ್ಕಂಥ ವಿಚಾರದಲ್ಲಿ ಹೋರಾಟ ನಡೆಸಿದ್ದರು. ಆದರೆ ಒಂದೆರಡು ಕುಟುಂಬದವರು ಈಡೀ ಮರಳನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರಿಂದ ಪಡೆದು ಸ್ವಂತಕ್ಕೆ ಉಪಯೋಗಿಸಿಕೊಂಡಿರುವುದರಿಂದ ಅಲ್ಲಿ ಒಂದು ಹೋರಾಟ ಪ್ರಾರಂಭವಾಗಿದೆ.